ಮತ್ತು ಎಳ್ಳು ಬೆಳೆಗಳಿಗೆ ಬೆಳೆ ವಿಮಾ ನಷ್ಟ ಪರಿಹಾರವನ್ನು ಅಂತಿಮಗೊಳಿಸಿದ್ದು, ಶಿವಮೊಗ್ಗ ತಾಲ್ಲೂಕಿನಲ್ಲಿ ಈ ಹಂಗಾಮಿನಲ್ಲಿ, ಈ 9 ಬೆಳೆಗಳಿಗೆ 6,359 ರೈತರು ರೂ. 25.35 ಲಕ್ಷ ವಿಮಾ ಕಂತನ್ನು ಪಾವತಿಸಿ ಬೆಳೆ ವಿಮೆ ಯೋಜನೆಯಡಿ ಪಾಲ್ಗೊಂಡಿರುತ್ತಾರೆ. ಪಾಲ್ಗೊಂಡ ರೈತರಲ್ಲಿ 495 ರೈತರಿಗೆ ರೂ. 4.13 ಲಕ್ಷಗಳನ್ನು ಬೆಳೆ ನಷ್ಟ ಪರಿಹಾರವಾಗಿ ಪಡೆಯುವವರಿದ್ದಾರೆ. ಉಳಿದ ಬೆಳೆಗಳಾದ ಭತ್ತ, ಮುಸುಕಿನ ಜೋಳ, ನೆಲಗಡಲೆ (ಶೇಂಗಾ), ಆಲೂಗಡ್ಡೆ, ಈರುಳ್ಳಿ, ಹತ್ತಿ ಮತ್ತು ಕಬ್ಬು ಬೆಳೆಗಳಿಗೆ ಭಾರತೀಯ ಸಾಮಾನ್ಯ ವಿಮಾ ನಿಗಮವು ವರದಿಯನ್ನು ಕ್ರೋಢೀಕರಿಸಿದ್ದು, ಇಷ್ಟರಲ್ಲೆ ಅಂತಿಮಗೊಳಿಸುತ್ತದೆ.

ಆ) ಇಲ್ಲ

ಶಿವಮೊಗ್ಗ ಕ್ಷೇತ್ರ ವ್ಯಾಪ್ತಿಯಲ್ಲಿ ಜಲಾನಯನ ಯೋಜನೆ ಅನುಷ್ಠಾನ

3169 (3667) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ: ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆಯೇ; ವಿವರ ಒದಗಿಸುವುದು;

ಆ) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಗೆ ಸಂಬಂಧಿಸಿದಂತೆ, ಒಣಭೂಮಿ ಅಭಿವೃದ್ಧಿ ಯೋಜನೆಯಡಿಯಲ್ಲಿ 1999 ರಿಂದ ಇಲ್ಲಿಯವರೆಗೆ ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳ ವಿವರ ತಿಳಿಸುವುದು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದಲ್ಲಿ 2000–01ನೇ ಸಾಲಿನಿಂದ 2002–03 ರವರೆಗೆ ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿ ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಿಲ್ಲ. ಆದರೆ, 2003–04ನೇ ಸಾಲಿನ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರದ ಮಂಜೂರಾತಿಗೆ ಸಲ್ಲಿಸಲಾಗಿದ್ದು, ಮಂಜೂರಾತಿಯನ್ನು ನಿರೀಕ್ಷಿಸಲಾಗಿದೆ.

ಆ) ಈ ಕ್ಷೇತ್ರದ ವ್ಯಾಪ್ತಿಗೆ ಬರುವ ಬಹುತೇಕ ಕೃಷಿ ಪ್ರದೇಶವು ಭದ್ರಾ ಮತ್ತು ತುಂಗಾ ನೀರಾವರಿ ಪ್ರದೇಶವು ಭದ್ರಾ ಮತ್ತು ತುಂಗಾ ನೀರಾವರಿ ಪ್ರದೇಶದ ವ್ಯಾಪ್ತಿಗೆ ಸೇರಿರುವುದರಿಂದ ಕಳೆದ ಮೂರು ವರ್ಷಗಳಲ್ಲಿ ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಯಾವುದೇ ಒಣಭೂಮಿ ಕಾರ್ಯಕ್ರಮವನ್ನು ಕೈಗೊಂಡಿರುವುದಿಲ್ಲ.

ಶಿವಮೊಗ್ಗ ಜಿಲ್ಲೆಯಲ್ಲಿ ಬೆಳೆಯುವ ತಾಳೆಹಣ್ಣು ಮಾರಾಟ

3170 (3668) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯ ವ್ಯಾಪ್ತಿಯಲ್ಲಿ ಬೆಳೆಯುವ ತಾಳೆಹಣ್ಣು ಮಾರಾಟದ ಸಲುವಾಗಿ ನಿಯೋಜಿಸಲಾದ ಕಂಪನಿ ಯಾವುದು?

ಆ) ಹಾಲಿ ಓಸ್ವಾಲ್ ಕಂಪನಿಗೆ (ಆಯಿಲ್ ಪಾಮ್) ಸರ್ಕಾರದ ವತಿಯಿಂದ ಮಾರಾಟದ ಏಜೆನ್ಸಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಇ) ಈ ಹಿಂದೆ ಈ ಕಂಪನಿಯಿಂದ ಸಮರ್ಪಕವಾಗಿ ರೈತರಿಂದ ತಾಳೆ ಹಣ್ಣು ಮಾರಾಟದ ಬಗ್ಗೆ ಹಣ ಪಾವತಿ ಮಾಡದೇ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ದೂರು ಬಂದಿದೆಯೇ? ವಿವರಗಳನ್ನು ಒದಗಿಸುವುದು.

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ಮೆ: ಸಿಂಹಪುರಿ ಅಗ್ರಿಟೆಕ್ ಸಂಸ್ಥೆ ಬೆಂಗಳೂರು

ಆ) ಇಲ್ಲ

ಇ) ಬಂದಿದೆ

1998–99 ಹಾಗೂ 1999–2000ನೇ ಸಾಲಿನಲ್ಲಿ ರೈತರಿಂದ ತಾಳೆ ಹಣ್ಣುಗಳನ್ನು ಸಂಗ್ರಹಣೆ ಮಾಡಿ ರೈತರಿಗೆ ಪಾವತಿ ಮಾಡಬೇಕಾದ ರೂ. 35.21 ಲಕ್ಷ ಹಣವನ್ನು ಪಾವತಿ ಮಾಡಿರಲಿಲ್ಲ. ಶಿವಮೊಗ್ಗ ವಲಯದ ರೈತರ ಹಿತದೃಷ್ಟಿಯಿಂದ ಸರ್ಕಾರವು ಈ ಹಣವನ್ನು ರೂತರಿಗೆಪ ಪಾವತಿ ಮಾಡಿರುತ್ತದೆ.

ತೋಟಗಾರಿಕಾ ಇಲಾಖಾ ವತಿಯಿಂದ ನೀಡಲಾದ ಸೌಲಭ್ಯಗಳು

3171 (3669) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 1999 ರಿಂದ 2002–03ನೇ ಸಾಲಿನವರೆಗೆ ತೋಟಗಾರಿಕೆ ಇಲಾಖೆ ವತಿಯಿಂದ ರೈತರಿಗೆ ಹಮ್ಮಿಕೊಳ್ಳಲಾದ ವಿವಿಧ ಯೋಜನೆಗಳು ಯಾವುವು? ಯೋಜನಾ ವೆಚ್ಚವೆಷ್ಟು?

ಆ) ಈ ಯೋಜನೆಗಳಲ್ಲಿ ರೈತರಿಗೆ ಮಂಜೂರು ಮಾಡಿದ ಸಹಾಯಧನವೆಷ್ಟು?

ಇ) ತೋಟಗಾರಿಕೆ ಇಲಾಖೆ ವತಿಯಿಂದ ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿ:ವರ್ಗಗಳ ರೈತರಿಗೆ ನೀಡಲಾದ ಸೌಲಭ್ಯಗಳ ವಿವರ ತಿಳಿಸುವುದು; (ಫಲಾನುಭವಿಗಳ ವಿವರದೊಂದಿಗೆ) ವಿವರ ಒದಗಿಸುವುದು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) 1999 ರಿಂದ 2002–03ನೇ ಸಾಲಿನವರೆಗೆ ತೋಟಗಾರಿಕೆ ಇಲಾಖೆ ವತಿಯಿಂದ ರೈತರಿಗಾಗಿ ಹಮ್ಮಿಕೊಂಡಿರುವ ವಿವಿಧ ಯೋಜನೆಗಳು ಇಂತಿವೆ.

1. ತೋಟಗಾರಿಕೆ ಬೆಳೆಗಳಿಗಾಗಿ ಉತ್ಕೃಷ್ಟ ಗುಣಮಟ್ಟದ ನಾಟಿ ಮಾಡುವ ವಸ್ತುಗಳ ಉತ್ಪಾದನೆ ಮತ್ತು ವಿತರಣೆ (2) ಇಲಾಖಾ ಪ್ರಯೋಗಶಾಲೆಗಳ ಅಭಿವೃದ್ಧಿ ಯೋಜನೆ (3) ತೋಟದ ಬೆಳೆಗಳ ಕೀಟ–ರೋಗಗಳ ಸಮಗ್ರ ನಿಯಂತ್ರಣ ಯೋಜನೆ (4) ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ ಯೋಜನೆ (5) ತೋಟಗಾರಿಕೆ ಬೆಳೆಗಳ ಸಸ್ಯೋತ್ಪಾದನೆ ಯೋಜನೆ (6) ಸಸ್ಯ ಸಂರಕ್ಷಣಾ ಪ್ರಯೋಗಾಲಯಗಳು (7) ರೈತರಿಗೆ ತರಬೇತಿ 8) ಸರ್ಕಾರಿ ಕಛೇರಿ ಮತ್ತು ಅತಿಥಿ ಗೃಹಗಳ ಮುಂದಿಡಲು ಅಲಂಕಾರಿಕ ಗಿಡಗಳ ಅಭಿವೃದ್ಧಿ 9) ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ ಯೋಜನೆಯಡಿಯಲ್ಲಿ ರೈತರಿಗೆ ಸಹಾಯ (10) ಸಾಮಾಜಿಕ ತೋಟಗಾರಿಕೆ (11) ಸಸ್ಯ ಸಂರಕ್ಷಣೆ (12) ವಿಶೇಷ ಘಟಕ ಯೋಜನೆ (13) ಗಿರಿಜನ ಉಪಯೋಜನೆ (14) ಉಷ್ಣ ಮತ್ತು ಶುಷ್ಕವಲಯದ ಹಣ್ಣುಗಳ ಸಮಗ್ರ ಅಭಿವೃದ್ಧಿ (15) ತರಕಾರಿ ಬೆಳೆಗಳ ಸಮಗ್ರ ಅಭಿವೃದ್ಧಿ (16) ಸಮಗ್ರ ಕೋಕೋ ಅಭಿವೃದ್ಧಿ (17) ಸಮಗ್ರ ಗೇರು ಅಭಿವೃದ್ಧಿ (18) ಔಷಧಿಯ ಹಾಗೂ ಸುಗಂಧಿತ ಬೆಳೆಗಳ ಸಮಗ್ರ